**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಸತ್ರ ಪ್ರಕರಣ ಸಂಖ್ಯೆ: 81/2019**

ದಿನಾಂಕ: 10.07.2024
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ದೋ.ಸಾ. - 12 ಅ.ಸಾ. - 9

| | | |
|---|---|---|
| ಹೆಸರು | : | ಶ್ರೀ. ವಿ.ಎಸ್.ಶಬರೀಶ್ |
| ತಂದೆಯ ಹೆಸರು | : | ಸೆಲ್ವ್ ಕುಮಾರ್ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಆರಕ್ಷಕ ನಿರೀಕ್ಷಕರು, ಬಾಗಲೂರು ಆರಕ್ಷಕ ಠಾಣೆ |
| ವಾಸ | : | ಬಾಗಲೂರು |

**ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನಾನು 2018 ರ ಆಗಸ್ಟ್ ತಿಂಗಳಲ್ಲಿನಲ್ಲಿ ಮಾಗಡಿ ವೃತ್ತದ ಆರಕ್ಷಕ ನಿರೀಕ್ಕಕರು ಎಂದು ಕರ್ತವ್ಯ ನಿರ್ವಹಿಸುತ್ತಿದ್ದೆ. ದಿನಾಂಕ 23.08.2018 ರಂದು ದೋ.ಪ.ಸಾಕ್ಷಿ-11 ರವರಿಂದ ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಪಡೆದು ಮಾಡಿದ್ದ ತನಿಖೆಯನ್ನು ಪರಿಶೀಲಿಸಿರುತ್ತೇನೆ. ದಿನಾಂಕ 23.08.2018 ರಂದು ತಲೆ ಮರೆಸಿಕೊಂಡಿದ್ದ 8 ರಿಂದ 11 ರವರ ಪತ್ತೆಗಾಗಿ ಸಿಬ್ಬಂದಿಗಳ ನೇಮಕ ಮಾಡಿರುತ್ತೇನೆ. ದಿನಾಂಕ 10.09.2018 ರಂದು ತಲೆ ಮರೆಸಿಕೊಂಡಿದ್ದ 8 ರಿಂದ 11 ರವರ ಪತ್ತೆಗಾಗಿ ಪುನಃ ಸಿಬ್ಬಂದಿಗಳ ನೇಮಕ ಮಾಡಿರುತ್ತೇನೆ. ದಿನಾಂಕ 17.10.2018 ರಂದು ಈ ಪ್ರಕರಣದಲ್ಲಿ ಕೃತ್ಯಕ್ಕೆ ಬಳಸಿದ ದ್ವಿ ಚಕ್ರ ವಾಹನವನ್ನು ಮಧ್ಯಂತರ ಆದೇಶ ಪಡೆದು ತಂದು ದೋ.ಪ.ಸಾಕ್ಷಿ-04 ರವರು ಹಾಜರುಪಡಿಸಿದ್ದು ಅವರಿಂದ ಸೂಕ್ತ ನಷ್ಟ ಭರ್ತಿ ಪತ್ರ ಬರೆಸಿಕೊಂಡು ವಾಹನದ ಪೋಟೋಗಳನ್ನು ತೆಗೆಸಿ ಅವರ ವಶಕ್ಕೆ ನೀಡಿ ಅವರ ಹೇಳಿಕೆ ಪಡೆದಿರುತ್ತೇನೆ. ನಿ.ಪಿ-3 ರಲ್ಲಿನ

ದ್ವಿಚಕ್ರ ವಾಹನ ಸದರಿ ವಾಹನ ಇರುತ್ತದೆ. ದಿನಾಂಕ 20.10.2018 ರಂದು ತನಿಖೆ ಮುಗಿದಿದ್ದು ಆರೋಪಿ-8 ರಿಂದ 11 ರವರು ಪತ್ತೆಯಾಗದ ಕಾರಣ ಅವರನ್ನು ತಲೆಮರೆಸಿಕೊಂಡಿರುತ್ತಾರೆಂದು ತೋರಿಸಿ ಆರೋಪಿಗಳ ವಿರುದ್ಧ ದೋ.ಪ. ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲುಃ ಶ್ರೀ.ಟಿ.ಜಿ. ವಕೀಲರಿಂದ.</u>**

ನಾನು ತನಿಖೆ ವಹಿಸಿಕೊಂಡ ನಂತರ ಸ್ಥಳಕ್ಕೆ ಭೇಟಿ ನೀಡಿಲ್ಲ. ಈ ಪ್ರಕರಣದಲ್ಲಿ ತೋರಿಸಿರುವ ಪಂಚರುಗಳು ನಮ್ಮ ಠಾಣೆಯ ಸಿದ್ದ ಪಡಿಸಿಟ್ಟ ಸಾಕ್ಷಿಗಳು ಎನ್ನುವುದು ಸರಿ ಅಲ್ಲ. 11 ನೇ ಆರೋಪಿ ಯಾರು ಮತ್ತು ಎಲ್ಲಿಂದ ಬಂದರು ಎಂದು ದೋ.ಪ. ಯಲ್ಲಿ ತೋರಿಸಿಲ್ಲ ಎನ್ನುವುದು ಸರಿ ಅಲ್ಲ. ಆರೋಪಿ-1 ಘಟನೆ ನಡೆಯಿತು ಎನ್ನುವ ಸಮಯಕ್ಕೆ ಬೇರೆ ಪ್ರಕರಣದಲ್ಲಿ ನ್ಯಾಯಾಂಗದ ಬಂಧನಲ್ಲಿ ಇದ್ದರೂ ಸುಳ್ಳಾಗಿ ಈ ಪ್ರಕರಳದಲ್ಲಿ ಸೇರಿಸಿದ್ದೇವೆ ಎನ್ನುವುದು ಸರಿ ಅಲ್ಲ. ನನ್ನ ತನಿಖೆಯಲ್ಲಿ ಆರೋಪಿಗಳು ಯಾರು ಆರೋಪಿಸಿರುವಂತೆ ಕೃತ್ಯ ಮಾಡದೇ ಇರುವುದು ಕಂಡು ಬಂದರು ನನ್ನ ಹಿಂದಿನ ತನಿಖಾಧಿಕಾರಿಯವರು ಮಾಡಿರುತ್ತಾರೆ ಎನ್ನುವ ತನಿಖೆಗೆ ಪೂರಕವಾಗಿ ಸುಳ್ಳು ದೋ.ಪ. ಸಲ್ಲಿಸಿದ್ದೇನೆ ಎನ್ನುವುದು ಸರಿ ಅಲ್ಲ. ಆರೋಪಿಗಳ ಮೊಬೈಲ್ ಟವರ್ ಲೊಕೇಶನ್ ಕುರಿತು ತನಿಖೆ ಮಾಡಿದ್ದೇನೆ. ಮು.ಮಾ.ಗಳನ್ನು ಠಾಣೆಯಲ್ಲಿ ಸೃಷ್ಟಿ ಮಾಡಿದ್ದೇವೆ ಎನ್ನುವುದು ಸರಿ ಅಲ್ಲ. ಸಲ್ಲಿಸಿರುವ ಸುಳ್ಳು ದೋ.ಪ.ಗೆ ಪೂರಕವಾಗಿ ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎನ್ನುವುದು ಸರಿ ಅಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ರಾಘವೇಂದ್ರ ಜಿ.)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.